ಮಾಸ್ಟರ್ ಪ್ಲಾನ್–2015

2320 (1455); ಶ್ರೀ ಮುನಿರಾಜು (ದಾಸರಹಳ್ಳಿ)

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾಸ್ಟರ್ ಪ್ಲಾನ್ 2015 ನ್ನು ಸಿದ್ಧಪಡಿಸುವ ಯೋಜನೆ ಯಾವ ಹಂತದಲ್ಲಿದೆ;

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾಸ್ಟರ್ ಪ್ಲಾನ್ 2015 ನ್ನು ಪರಿಷ್ಕರಿಸಲು ಕಾರಣವೇನು;

ಇ) ಮಾಸ್ಟರ್ ಪ್ಲಾನ್ ಬದಲಾವಣೆ ಮಾಡುವಾಗ ಅನುಸರಿಸುತ್ತಿರುವ ಮಾನದಂಡವೇನು; ಇದಕ್ಕಾಗಿ ಸಾರ್ವಜನಿಕರಿಂದ ಆಕ್ಷೇಪಣೆ ಆಹ್ವಾನಿಸಲಾಗಿದೆಯೇ; ಇಲ್ಲದಿದ್ದರೆ ಕಾರಣವೇನು;

ಈ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾಸ್ಟರ್ ಪ್ಲಾನ್ 2015 ನ್ನು ಸಿದ್ಧಪಡಿಸುವ ಯೋಜನೆ ವಿಳಂಬವಾಗಲು ಕಾರಣವೇನು; ಯಾವಾಗ ಪೂರ್ಣಗೊಳ್ಳಲಿದೆ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ 25.06.2007 ರಂದು ಅನುಮೋದನೆಗೊಂಡಿರುವ RMP-2015 ರ ಅವಧಿಯು 2015 ರ ಅಂತ್ಯದವರೆಗೂ ಚಾಲ್ತಿಯಲ್ಲಿದ್ದು, ಪ್ರಸ್ತುತ RMP-2015 ಅನ್ನು ಪರಿಷ್ಕರಣೆ ಮಾಡಲು ಪ್ರಾಧಿಕಾರದಿಂದ ಕೈಗೆತ್ತಿಕೊಂಡಿದ್ದು, RMP-2031 ರ ತಯಾರಿಕೆ ಕಾರ್ಯವು ಚಾಲ್ತಿಯಲ್ಲಿದ್ದು, ಬೇಸ್ ಮ್ಯಾಪ್ ಕಾರ್ಯವು ಮುಕ್ತಾಯಗೊಂಡಿರುತ್ತದೆ. ಹಾಲಿ ಭೂ ಉಪಯೋಗ ನಕ್ಷೆಯನ್ನು ತಯಾರಿಸುವ ಕಾರ್ಯವು ಪ್ರಗತಿಯಲ್ಲಿದೆ.

ಆ) ಕೆ.ಟಿ.ಸಿ.ಪಿ. ಕಾಯ್ದೆ 1961 ರನ್ವಯ ಸೆಕ್ಷನ್ 10 ರಂತೆ ಪ್ರತಿ 10 ವರ್ಷಗಳಿಗೊಮ್ಮೆ ಮಾಸ್ಟರ್ ಪ್ಲಾನ್ ಅನ್ನು ಪರಿಷ್ಕರಿಸಲು ಅವಕಾಶ ಕಲ್ಪಿಸಲಾಗಿದೆ.

ಇ) ಕೆ.ಟಿ.ಸಿ.ಪಿ. ಕಾಯ್ದೆ 1961 ರನ್ವಯ ಸೆಕ್ಷನ್ 10 ರಂತೆ ಪ್ರತಿ 10 ವರ್ಷಗಳಿಗೊಮ್ಮೆ ಮಾಸ್ಟರ್ ಪ್ಲಾನ್ ಅನ್ನು ಪರಿಷ್ಕರಿಸಲು ಅವಕಾಶ ಕಲ್ಪಿಸಲಾಗಿದೆ. ಕೆ.ಟಿ.ಸಿ.ಪಿ. ಕಾಯ್ದೆ 1961 ಸೆಕ್ಷನ್ 10 ರಂತೆ ಸಾರ್ವಜನಿಕರಿಂದ ಸಲಹೆ/ಸೂಚನೆಗಳನ್ನು ಆಹ್ವಾನಿಸಲಾಗಿತ್ತು. ಹಾಗೂ ಕರಡು ಮಾಸ್ಟರ್ ಪ್ಲಾನ್–2031 ಸರ್ಕಾರದಿಂದ ಅನುಮೋದನೆಯಾದ ನಂತರ ಸಾರ್ವಜನಿಕರಿಂದ ಸಲಹೆ/ಸೂಚನೆಗಳನ್ನು ಆಹ್ವಾನಿಸಲಾಗುತ್ತದೆ.

ಈ) RMP-2031 ನ್ನು ತಯಾರಿಸುವಲ್ಲಿ ವಿಳಂಬವಾಗಿರುವುದಿಲ್ಲ. RMP-2015 ರ ಅವಧಿಯು 2015 ಕ್ಕೆ ಪೂರ್ಣಗೊಳ್ಳಲಿದ್ದು, ಈ ಅವಧಿಯೊಳಗೆ ಕರಡು ಮಹಾಯೋಜನೆ 2031 ನ್ನು ಸಿದ್ಧಪಡಿಸಿ, ಪ್ರಾಧಿಕಾರವು ಸರ್ಕಾರದ ಅನುಮೋದನೆಗೆ ಸಲ್ಲಿಸಿದ ನಂತರ ಮುಂದಿನ ಕ್ರಮ ವಹಿಸಲಾಗುತ್ತದೆ.

ಮರಳು ನೀತಿ ಅನುಷ್ಠಾನ

2324 (2621); ಶ್ರೀ ನಾರಾಯಣ ಗೌಡ, (ಕೆ.ಆರ್. ಪೇಟೆ)

ಅ) ರಾಜ್ಯದಲ್ಲಿ ಹೊಸ ಮರಳು ನೀತಿಯನ್ನು ಯಶಸ್ವಿಯಾಗಿ ಜಾರಿಗೊಳಿಸಿ ಮರಳು ಮಾಫಿಯಾ ನಿಯಂತ್ರಿಸಲು ಸರ್ಕಾರವು ಯಶಸ್ವಿಯಾಗಿದೆಯೇ;

ಆ) ರಾಜ್ಯದಲ್ಲಿ ಫಿಲ್ಟರ್ ಮರಳು ಹಾಗೂ ಸಮುದ್ರ ತೀರದ ಮರಳು ಮಾರಾಟ ದಂಧೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಮಂಡ್ಯ ಜಿಲ್ಲೆಯಲ್ಲಿ ಅನಧಿಕೃತವಾಗಿ ಮರಳು ಸಾಗಾಣಿಕೆ ಮಾಡುವ ಎಷ್ಟು ಪ್ರಕರಣಗಳು ವರದಿಯಾಗಿದೆ ಇದರ ಬಗ್ಗೆ ಕೈಗೊಂಡಿರುವ ಕ್ರಮಗಳೇನು; (ಕ್ಷೇತ್ರವಾರು ಮಾಹಿತಿ ನೀಡುವುದು)